"ಬ್ರೆಡ್ ನಿನಗೆ ಇಷ್ಟಾ ತಾನೆ?..."

"ಹೌದು, ಇಷ್ಟವೆ."

"ಇಷ್ಟವಾಗದಿದ್ದರೆ, ಇಲ್ಲಿ ನಿನಗಿಷ್ಟವಾದ ಬೇರೆ ಯಾವುದನ್ನು ಬೇಕಾದರೂ ಖರೀದಿಸಬಹುದು. ಇದು ನಿನ್ನ ಆ ಬಡತನದ ತುಂಬಿದ ಗ್ರಾಮವಲ್ಲ, ಇದು ನಗರ."

"ನನಗೆ ಈ ಬ್ರೆಡ್ಡೇ ಸಾಕು."

"ಲಕ್ಕಿ ಹೋಟೆಲಿನ ಪರೋಟ, ಮಾರುತಿ ಹೋಟೆಲಿನ ಇಡ್ಲಿ–ಸಾಂಬರು, ನ್ಯೂ–ಇಂಡಿಯಾದ ಮಸಾಲೆದೋಸೆ... ಯಾವುದನ್ನು ಬೇಕಾದರೂ... ಆ ಚೀರುವಮ್ಮಳನ್ನು ಕಳಿಸಿ ತರಿಸಿಕೊ..."

"ನನಗೆ ಹಸಿವಾಗೋದಿಕ್ಕೆ ಸಮಯವಾಗಿಲ್ಲ. ಇಷ್ಟು ಬೇಗ ಆಹಾರ ಸೇವಿಸಿ ಅಭ್ಯಾಸ ಇಲ್ಲದಿರುವುದರಿಂದಲೇ ನನಗಿನ್ನು ಹಸಿವಾಗ್ತಾ ಇಲ್ಲ!"

ಖಾಲಿಯಾದ ಪ್ಲೇಟನ್ನು ಮುಟ್ಟಿನೋಡಿ ಆತ ಹೇಳಿದ:

"ಮತ್ತೆರಡು ಸ್ಲೈಸು ಬ್ರೆಡ್ ತಿನ್ನೊಕ್ಕಾಗಲ್ಲಂತಲ್ಲ... ತೂಕ ಹೆಚ್ಚಾಗತ್ತೇಂತ ಹೆದರಿಕೆ!"

ಬಹಳ ಕಠಿಣವಾದ ಕೆಲಸವೊಂದನ್ನು ಮಾಡಿಮುಗಿಸುವಂತೆ ಆಯಾಸಪಟ್ಟು ಅವಳು ಆಹಾರವನ್ನು ಸೇವಿಸ ತೊಡಗಿದಳು.

ಶ್ರೀಮಂತರು ಖರೀದಿಸುವ ಹೋಟೆಲಿನ ಆಹಾರಗಳ ಬಗ್ಗೆ ಕೇಳಿ ತಿಳಿದುಕೊಳ್ಳಲು ಅವಳಿಗಿಷ್ಟವಿರಲಿಲ್ಲ.

ಕೈಗಳನ್ನು ಒರೆಸಿಕೊಳ್ಳುತ್ತಾ ಆತ ತುಂಡಾಗಿದ್ದ ತನ್ನ ಸಂಭಾಷಣೆಯನ್ನು ಮುಂದುವರಿಸಿದ.

"ನಗರದ ಹೃದಯ ಭಾಗದಲ್ಲಿ ಎಲ್ಲಾ ಅನುಕೂಲಗಳಿರುವ ಒಂದು ಮನೆ ಸಿಗಬೇಕಾದರೆ, ನಿಜಕ್ಕೂ ಅದೃಷ್ಟ ಮಾಡಿರಬೇಕು! ಅಷ್ಟಕ್ಕೂ ನಾನು ಅದೃಷ್ಟವಂತನೆ, ಅಲ್ಲವೇ!"

ಆತ ಎದ್ದು ಬಂದು ಅವಳ ಕೆನ್ನೆಯನ್ನು ಚುಂಬಿಸಿದ.

ಮಾಯವಾಗದ ಮುಗುಳು ನಗೆಯೊಂದಿಗೆ ಆತ ಅಂಗಳಕ್ಕಿಳಿದ.

"ಬಾಗಿಲನ್ನು ಹಾಕಿಕೊಂಡು ಒಳಗಡೆ ಇರು. ಗೇಟನ್ನು ನಾನು ಹಾಕೊಳ್ತೀನಿ!"

ಆಕೆ ಬೆಚ್ಚಿದಳು.

ಸಾಲುಸಾಲಾಗಿ ಉದ್ದವಾಗುವ ತಂತಿಗಳು ಬಿಸಿಲಿನ ಝಳಕ್ಕೆ ಮಿಂಚಿದವು. ದೊಡ್ಡನಗರಗಳಲ್ಲಿ, ಒಂದೆ ಕೋಣೆಯಿರುವ ಫ್ಲ್ಯಾಟುಗಳಲ್ಲಿ ಒಳಗೆ ಕೂಡಿಹಾಕಿ ಕೆಲಸಕ್ಕೆ ಹೋಗುವ ಗಂಡಂದಿರ ಬಗ್ಗೆ ಅವಳು ಯೋಚಿಸಿದಳು.

ಅವಳು ಒಳಗಿನಿಂದ ಬಾಗಿಲಿನ ಬೋಲ್ಟ್ ಹಾಕಿಕೊಂಡಳು. ಕಿಟಕಿಯ ಕರ್ಟನುಗಳಿಂದ ಬಿಸಿಲನ್ನು ಮರೆಮಾಡಿದಳು.

ಮಧ್ಯಾಹ್ನದ ಊಟ ಸ್ನೇಹಿತನ ಮನೆಯಲ್ಲಾಗುವುದರಿಂದ, ಹೆಚ್ಚಿಗೆ ಕೆಲಸವಿಲ್ಲದೆ ಮನೆಕೆಲಸದವಳು ಬೇಗನೆ ಹೊರಟು ಹೋದಳು.

ಕರ್ಟನುಗಳಿಂದ ಮರೆಮಾಡಲು ಸಾಧ್ಯವಾಗದ ವೆಂಟಿಲೇಟರುಗಳ ನೇರಕ್ಕೆ, ತೆಂಗಿನ ಮಡಲುಗಳ ಮೇಲೆ ಕುಳಿತಿದ್ದ ಕಾಗೆಯೊಂದು ಮನೆಯೊಳಗಡೆಗೆ ದಿಟ್ಟಿಸಿ ನೋಡಿತು.

ಮೇಜಿನ ಮೇಲೆ ಬಾಕಿ ಉಳಿದುಕೊಂಡಿದ್ದ ಒಂದು ಬ್ರೆಡ್ಡಿನ ತುಂಡನ್ನು ಕರ್ಟನ್ನು ಸರಿಸಿ ಹೊರಗಡೆಗೆ ಬೀಸಿ ಎಸೆದಳು.

ನಂತರ ಅವಳು ಮಲಗುವ ಕೋಣೆಗೆ ಬಂದು ಹಾಸಿಗೆಯ ಮೇಲೆ ಮಲಗಿ ನಿದ್ರೆಯನ್ನು ಧ್ಯಾನಿಸ ತೊಡಗಿದಳು.

ಈ ಏಕಾಂತತೆಯನ್ನು ಬೆಲೆಕೊಟ್ಟು ಖರೀದಿಸಲು, ತನ್ನ ನೌಕರಿಯನ್ನು ಉಪೇಕ್ಷೆಮಾಡಿ ಬಿಟ್ಟು